ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ಸೋಮವಾರ, ದಿನಾಂಕ: 09ನೇ ಮಾರ್ಚ್, 2020

ಯಶಸ್ವಿನಿ ಯೋಜನೆ ಕುರಿತು

ಶ್ರೀ ಕೆ.ಸಿ.ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

459 (590) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಸರ್ಕಾರದ ಯಶಸ್ವಿನಿ ಯೋಜನೆ ಈಗಲೂ ಕಾರ್ಯ ರೂಪದಲ್ಲಿದೆಯೇ ;

(ಆ) ಇದ್ದಲ್ಲಿ, ಈ ಯೋಜನೆಯ ಫಲಾನುಭವಿಗಳು ಯಾರ್ಯಾರು ; ರೈತರಲ್ಲದೆ ಬೇರೆಯವರು ಈ ಯೋಜನೆ ಫಲಾನುಭವವನ್ನು ಪಡೆಯಬಹುದೆ ; ಹಾಗಿದಲ್ಲಿ, ಯಾರು ;

(ಇ) ಈ ಹಿಂದೆ ಇದರ ಅನುಕೂಲವನ್ನು ರೈತರಲ್ಲದವರು ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಇದನ್ನು ಈ ಸಾಲಿನಲ್ಲಿಯೂ ಮುಂದುವರಿಸಲಾಗಿದೆಯೇ ?